ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಸೋಮವಾರ, ದಿನಾಂಕ : 28 ನೇ ಸೆಪ್ಟೆಂಬರ್, 2020

ರಾಜ್ಯದಲ್ಲಿ ಕೋವಿಡ್ ನಿಯಂತ್ರಣಕ್ಕಾಗಿ ಕೈಗೊಂಡ ಮೂಲಭೂತ ಅವಶ್ಯಕ ಕ್ರಮಗಳ ಬಗ್ಗೆ

ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ) :-

756 (949) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕೋವಿಡ್-19 ನಿಯಂತ್ರಣಕ್ಕಾಗಿ 01/03/2020ರ ನಂತರ ಆರೋಗ್ಯ ಇಲಾಖೆಯಲ್ಲಿ ನೇಮಕ ಮಾಡಿಕೊಂಡ ತಾತ್ಕಾಲಿಕ ಗುತ್ತಿಗೆಯಾಧಾರಿತ ವೈದ್ಯ ಮತ್ತು ವೈದ್ಯಕೇತರ ಸಿಬ್ಬಂದಿಗಳ ಸಂಖ್ಯೆ ಎಷ್ಟು ; (ಹುದ್ದೆ ಮತ್ತು ಜಿಲ್ಲಾವಾರು ಮಾಹಿತಿಯನ್ನು ನೀಡುವುದು)

(ಆ) ಕೋವಿಡ್-19ರ ನಿಯಂತ್ರಣಕ್ಕಾಗಿ ಲಾಕ್‌ಡೌನ್ ಜಾರಿಗೆ ಬರುವ ಪೂರ್ವದಲ್ಲಿ ರಾಜ್ಯದಲ್ಲಿರುವ ವೆಂಟಿಲೇಟರ್ (Ventilator) ಗಳ ಸಂಖ್ಯೆ ಎಷ್ಟು ; ಕೋವಿಡ್ 19ರ ನಿಯಂತ್ರಣಕ್ಕಾಗಿ ಖರೀದಿಸಲಾದ ವೆಂಟಿಲೇಟರ್ (Ventilator) ಗಳ ಸಂಖ್ಯೆ ಎಷ್ಟು ; ಅವುಗಳ ಖರೀದಿಗೆ ಮಾಡಲಾದ ವೆಚ್ಚವೆಷ್ಟು ; ಈಗ ರಾಜ್ಯದಲ್ಲಿರುವ ವೆಂಟಿಲೇಟರ್ (Ventilator) ಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿಯನ್ನು ನೀಡುವುದು)

(ಇ) ಮಾರುಕಟ್ಟೆಯಲ್ಲಿ ಕೋವಿಡ್ ನಿಯಂತ್ರಿಸುವಲ್ಲಿ ಖರೀದಿಸಲಾಗುತ್ತಿರುವ ಮಾಸ್ಕ್, ಮುಖ ಕವಚ (Face shield) ಗ್ಲೌಸ್, ಪಿ.ಪಿ.ಇ ಕಿಟ್, ಸ್ಯಾನಿಟೈಸರ್‌ಗಳು ದುಬಾರಿ ಮತ್ತು ಕಳಪೆ ಮಟ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ವಸ್ತುಗಳಿಗೆ ಇಲಾಖೆಯಿಂದ ಶಿಫಾರಸ್ಸು ಮಾಡಲಾದ ನಿರ್ದಿಷ್ಟ ಪಡಿಸಿದ ಗುಣಮಟ್ಟ ಮತ್ತು ಪ್ರಮಾಣಿತ ಬೆಲೆ ಯಾವುದು ? (ಆದೇಶದ ಪ್ರತಿ ಒದಗಿಸುವುದು)